ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು

C.C. No.1105/2024.

ದಿನಾಂಕಃ**10.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲುಃ</u>- ಆರೋಪಿ ಪರ ಶ್ರೀ ಜಿ ಪಿ ಎಸ್ ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಆರೋಪಿಯ ಪರಿಚಯ ಇದೆ, ಅವರು ನಮ್ಮ ಗ್ರಾಮದ ವಾಸಿ. ಆರೋಪಿಯ ನನ್ನ ಅತ್ಮೀಯ ವ್ಯಕ್ತಿ ಎಂದರೆ ಸರಿ. ಆರೋಪಿ ಮತ್ತು ನನ್ನ ನಡುವೆ ಹಣಕಾಸಿನ ಕೊಟ್ಟು-ತೆಗೆದುಕೊಳ್ಳುವ ವ್ಯವಹಾರ ಸಹಃ ಇತ್ತು. ನಿಪಿ 1 ರ ವ್ಯವಹಾರಕ್ಕು ಪೂರ್ವದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಬೇರೆ ಹಣಕಾಸಿನ ವ್ಯವಹಾರ ಇತ್ತು. ನನಗೆ 12 ಎಕರೆ ಜಮೀನು ಇದೆ, ಅದರಲ್ಲಿ ತೋಟ ಇದೆ ಮತ್ತು ಈರುಳ್ಳಿ ಬೆಳೆ ಬೆಳೆಯುತ್ತೇನೆ. ಆರೋಪಿಯ ಕುಟುಂಬದಲ್ಲಿ ಅವರು ಇಬ್ಬರು ಅಣ್ಣ-ತಮ್ಮಂದಿರು ಇದ್ದಾರೆ ಅವರು ಈಗ ವಿಭಾಗವಾಗಿದ್ದಾರೆ, ಅವರ ತಂದೆ-ತಾಯಿ ಇದ್ದಾರೆ, ಈಗ ಅಣ್ಣ ಬೇರೆ ವಾಸವಾಗಿದ್ದಾರೆ. ನನಗೆ 12 ಎಕರೆ ಜಮೀನು ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ 12 ಎಕರೆ ಜಮೀನುಗಳು ನನ್ನ ತಾಯಿಯ ಮತ್ತು ನನ್ನ ಅತ್ತಿಗೆಯ ಹೆಸರಿನಲ್ಲಿಯೂ ಇದೆ. ಸದರಿ ಜಮೀನುಗಳ ಮೇಲೆ ಸಾಲ ಪಡೆದಿರುತ್ತೇವೆ. 12 ಎಕರೆ ಜಮೀನಿನಿಂದ ಬಂದ ಆದಾಯ ನನ್ನ ಜೀವನ ನಿರ್ವಹಣೆಗೆ ಹಾಗೂ ಸಾಲ ತೀರಿಸಲಷ್ಟೆ ಸರಿಯಾಗುತ್ತದೆ ಎಂದರೆ ಸರಿ, ಸಾಕ್ಷಿಯು ಸ್ವಲ್ಪ ಮೊತ್ತ ಉಳಿಕೆಯಾಗುತ್ತದೆ.

ನಾನು ಗಿರಿಯಾಪುರದ ಸೊಸೈಟಿ ಬ್ಯಾಂಕಿನಲ್ಲಿ ರೂ.10 ಲಕ್ಷ ಸಾಲ ಪಡೆದಿರುತ್ತೇನೆ. ಕೇಸು ದಾಖಲು ಮಾಡುವ ಮುನ್ನ ಆರೋಪಿಗೆ ನೋಟೀಸು ಕಳುಹಿಸಿಲ್ಲವೆಂದರೆ ಸರಿಯಲ್ಲ. ಆರೋಪಿ ವಾಹನ ಖರೀದಿಸಲು ಮತ್ತು ಕೊಳವೆ ಬಾವಿ ಕೊರೆಸಲು ಸಾಲ ಪಡೆದಕೊಂಡಿರುತ್ತಾರೆ ಎಂದು ಹೇಳಿದ್ದು ಅವರು ವಾಹನ ಖರೀದಿ ಮಾಡಿದ ಮತ್ತು ಕೊಳವೆ ಬಾವಿ ಕೊರಸಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು

ಅವರು ಕೊಳವೆ ಬಾವಿ ಕೊರೆಸಿರುವುದನ್ನು ನಾನು ನೋಡಿರುತ್ತೇನೆ ಆದರೆ ವಾಹನವನ್ನುನಾನು ನೋಡಿರುವುದಿಲ್ಲ. ಸಾಲ ಪಡೆಯಲು ಆರೋಪಿ ಒಬ್ಬರೇ ಮನೆಗೆ ಬಂದಿದ್ದರು. ನಾನು ಹಣ ನೀಡಿದ ವಿಚಾರ ನನ್ನ ತಾಯಿ ಮತ್ತು ಪತ್ನಿಗೂ ಗೊತ್ತಿರುತ್ತದೆ.

ಆರೋಪಿಯು ನನ್ನಿಂದ ದಿಃ10.01.2023 ರಂದು ರೂ.1 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡು ಒಂದು ಖಾಲಿ ಚೆಕ್ ಅನ್ನು ನೀಡಿರುತ್ತಾರೆ ಹೊರತು ನಾನು ಹೇಳಿದಂತೆ 2 ಲಕ್ಷ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಅದರ ಬಾಬ್ತು ಆರೋಪಿಯು ದಿಃ28.01.2023 ರಂದು ರೂ.50 ಸಾವಿರ ಮತ್ತು 21.02.2023 ರಂದು ರೂ.50 ಸಾವಿರ ಹಣವನ್ನು ಫೋನ್ ಪೇ ಮೂಲಕ ನನಗೆ ಪಾವತಿ ಮಾಡಿ ಸದರಿ ಸಾಲವನ್ನು ತೀರಿಸಿದರು ಸಹಃ ಅವರು ನೀಡಿದ ಖಾಲಿ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ಚೆಕ್ ಕೇಸು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮತ್ತು ಆರೋಪಿ ನಡುವೆ ಇದ್ದ ಬೇರೆ ವ್ಯವಹಾರದ ಬಾಬ್ತು ಸದರಿ ಹಣವನ್ನು ಹಾಕಿರುತ್ತಾರೆ ಹೊರತು ಈ ಪ್ರಕರಣದ ವ್ಯವಹಾರಕ್ಕೆ ಸಂಬಂಧಪಟ್ಟದ್ದಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.